## ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಹಿರಿಯೂರು.

### ಸಿ.ಸಿ ಸಂಖ್ಯೆ: 13/2023

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಲೋಕೇಶ್ ಹೆಚ್ ವಿ | ಸಿಡಬ್ಲ್ಯೂ-15 |
| ತಂದೆಯ ಹೆಸರು | - | ವೆಂಕಟರಮಣ | ಪಿಡಬ್ಲ್ಯೂ-6 |
| ವಯಸ್ಸು | - | ಸು. 42 ವರ್ಷ | ಪ್ರ.ವ.ಬೋ ದಿನಾಂಕ:25.09.2024 |
| ಉದ್ಯೋಗ | - | ಪಿ ಎಸ್ ಐ ತಳಕು ಪೊಲೀಸ್ ಠಾಣೆ | |
| ವಾಸ | - | ತಳಕು | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:-**

ನಾನು ಏಪ್ರಿಲ್ 2022 ರಿಂದ ಜೂನ್ 2023 ರ ವರೆಗೆ ಗೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ, ಪಿ ಎಸ್ ಐ ಆಗಿ ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕ: 04.08.2022 ರಂದು ಬೆಳಿಗ್ಗೆ 7.30 ರ ಸಮಯದಲ್ಲಿ ಹೆಚ್ ಸಿ 1367 ಗೌರಿಶ್ ರವರು ಹೇಳಿಕೆ ದೂರು ಪಡೆದು ಹಾಜರು ಪಡಿಸಿದ್ದು ಅದನ್ನು ಠಾಣಾ ಗುನ್ನಾ ನಂ,250/2022 ರಂತೆ ಪ್ರಕರಣ ದಾಖಲಿಸಿದ್ದೇನೆ. ಪ್ರ ವ ವರದಿ ಯನ್ನು ಮೇಲಾಧಿಕಾರಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸಾಕ್ಷಿ ದೂರಿನಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನುನಿಪಿ-1(ಬಿ) ಎಂದು , ಪ್ರ ವ ವರದಿಯನ್ನು ನಿಪಿ-15 ಎಂದು ಸಹಿಯನ್ನುನಿಪಿ-15(ಎ) ಎಂದು ಗುರುತಿಸಲಾಯಿತು. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ.3, 4 ರವರ ಸಮಕ್ಷಮ ಸುಮಾರು 10 ರಿಂದ 11 ಗಂಟೆ ಸಮಯದಲ್ಲಿ ಚಾಸಾ.2 ರವರು ತೋರಿಸಿದ ಜಾಗದಲ್ಲಿ ಪಂಚನಾಮೆ ಮಾಡಿ ಸ್ಥಳದಲ್ಲಿದ್ದ ಎಂ ಹೆಚ್ 45 ಎ ಎಲ್ 6367 ನ್ನು ವಶಪಡಿಸಿಕೊಂಡಿದ್ದೇನೆ.ನಿಪಿ-3 ರಂತೆ ನಕಾಶೆ ತಯಾರಿಸಿದ್ದೇನೆ. ನಿಪಿ-2, 3 ರಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಗಳನ್ನುನಿಪಿ-2(ಡಿ) 3(ಡಿ) ಎಂದು ಗುರುತಿಸಲಾಯಿತು. ಆ ದಿನ ನಿಪಿ-4 ರ

ಫೋಟೋವನ್ನು ಸ್ಥಳದಲ್ಲಿ ತೆಗೆಸಿದ್ದೇನೆ. ನಂತರ ಠಾಣೆಗೆ ಬಂದು ಪಿ ಎಫ್ ಬರೆಸಿನಿದೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ.16 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀ ಬಿ ಕೆ ವಕೀಲರಿಂದಃ–**

ದಿನಾಂಕಃ 04.08.2022 ರಂದು ನಾನು ಠಾಣೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೆಚ್ ಸಿ 1367 ಗೌರಿಶ್ ರವರನ್ನು ಆಸ್ಪತ್ರೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಅವರಿಂದ ಹೇಳಿಕೆ ದೂರು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ. ಪ್ರ ವ ವರದಿ ಯನ್ನು ತಯಾರಿಸಿಲ್ಲ . ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ ಚಾಸಾ.3, 4 ರವರ ಸಮಕ್ಷಮ ಸುಮಾರು 10 ರಿಂದ 11 ಗಂಟೆ ಸಮಯದಲ್ಲಿ ಚಾಸಾ.2 ರವರು ತೋರಿಸಿದ ಜಾಗದಲ್ಲಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಎಂ ಹೆಚ್ 45 ಎ ಎಲ್ 6367 ವಾಹನವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಿಪಿ–4 ರ ಫೋಟೋವನ್ನು ಸ್ಥಳದಲ್ಲಿ ತೆಗೆಸಿಲ್ಲ ಎಂದರೆ ಸರಿಯಲ್ಲ. ಮುಂದಿನ ತನಿಖೆಯನ್ನು ಚಾಸಾ.16 ರವರಿಗೆ ವಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಕ್ಕಾಗಿ ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.